doc-596
T-P-2

Reg No B G 155 25 11 72

The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸ್ವತಂತ್ರ
ಮಹೋತ್ಸವ
ಸಂವೇರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನೆ.ಸ

ಜಿಲ್ಲೆಯಿಂದ ಭತ್ತದ ಸಾಗಾಣಿಕೆಗೆ ನಿಶೇಧ

- ಸರ್ಕಸ್‌ವಾಲಾನ ಸಾಹಸ ಕಾರ್ಯ !

ತ್ರಿಚೂರು— ತಾನು ಸರ್ಕಸ್‌ವಾಲಾ ಎಂದು ಹೇಳಿಕೊಂಡ ವ್ಯಕ್ತಿಯು, ಗುರುವಾಯೂರಿನ ಪ್ರಖ್ಯಾತ ಕೃಷ್ಣದೇವಾಲಯದ ಮುಂದೆ ಒಂದು ಆಲದ ಮರಕ್ಕೆ ಹಗ್ಗ ಕಟ್ಟಿ, ತಾನು ಸಾಹಸ ಕಾರ್ಯ ಮಾಡುವುದಾಗಿಯೂ, ಅಲ್ಲಿ ನೆರೆದಿದ್ದ ಭಾರಿ ಯಾತ್ರಿಕರ ಗುಂಪು ಚಪ್ಪಾಳೆ ಹೊಡೆಯುತ್ತಿರಬೇಕೆಂದು ಹೇಳಿ ಕತ್ತಿಗೆ ಹಗ್ಗದ ಕುಣಿಕೆ ಬೀರಿ ಪ್ರಾಣತ್ಯಾಗ ಮಾಡಿದನು. ಜನರು ಚಪ್ಪಾಳೆ ಹೊಡೆಯುತ್ತಲೇ ಇದ್ದು ಆಮೇಲೆ ಅವನು ಸತ್ತಿರುವುದನ್ನು ಅರಿತರು.

★

ವಸ್ತುಪ್ರದರ್ಶನ ಮತ್ತು ಕ್ರೀಡಾರಂಗಕ್ಕೆ ಭೂಮಿ

● ಮೈಸೂರು— ದೊಡ್ಡಕೆರೆ ಮೈದಾನದಲ್ಲಿ ಹೊಸ ವಸ್ತುಪ್ರದರ್ಶನ ಕಟ್ಟಲು 30 ಎಕ್ರೆ ಭೂಮಿಯನ್ನೂ, ಕ್ರೀಡಾರಂಗಕ್ಕೆ 27 ಎಕ್ರೆ ಭೂಮಿಯನ್ನೂ ಉಚಿತವಾಗಿ ಕೊಡಲು ಪುರಸಭೆಯನ್ನು ಸರಕಾರ ಕೇಳಿದೆ.

★

ಮೈಸೂರು ದಸರಾ ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 25-11-1972 ಶನಿವಾರ

ಕಲಾ ಕ್ಷೇತ್ರ

5 ರಿಂದ 6 ಸಂಜೆ	ಶ್ರೀ ಎಸ್. ಸಾಸಯ್ಯ, ಬೆಂಗಳೂರು	ಕ್ಲಾರಿಯೊನೆಟ್
6 ರಿಂದ 7-30	ಶ್ರೀಮತಿ ರಾಜಲಕ್ಷ್ಮಿ ತಿರುನಾರಾಯಣ, ಬೆಂಗಳೂರು	ವೀಣಾವಾದನ
7-30 ರಿಂದ 9-30	ಉದಯ ಕಲಾನಿಕೇತನ (ಉದಯ ಕುಮಾರ್ ಮತ್ತು ಪಾರ್ಟಿ)	ವಿಶೇಷ ನಾಟಕ ಮದುವೆ ಮಾರ್ಕೆಟ್

ಜೀವನರಾಯನ ಕಟ್ಟೆ

6 ರಿಂದ 7	ಶ್ರೀ ಪಿ ಸೂರ್ಯನಾರಾಯಣ, ಮೈಸೂರು	ನಾಗಸ್ವರ
7 ರಿಂದ 8	ಶ್ರೀ ಎಂ ಎ ಜಯಶ್ರೀ, ಮೈಸೂರು	ಹಾಡುಗಾರಿಕೆ
8 ರಿಂದ 9-30	ಬಾಪೂಜಿ ಕಲಾ ಸಂಘ, ಮಂಡ್ಯ	ನಾಟಕ — "ತ್ಯಾಗಿ"

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

★

ವಿಭಾಗ ಅರಣ್ಯ ಅಧಿಕಾರಿಯವರ ಕಛೇರಿ
ಮೈಸೂರು ವಿಭಾಗ
ಮೈಸೂರು - 1

ಸಂಕ್ಷಿಪ್ತ

ಟೆಂಡರ್‌ಪ್ರಕಟಣೆ

ನಂ. ಜಿ 7 ಎಲಿ 21/72-73
ತಾ॥ 15-11-1972

★

ವಿಷಯ : 1973 ನೇ ಕ್ಯಾಲೆಂಡರ್ ವರ್ಷಕ್ಕೆ ಮೈಸೂರು ವಿಭಾಗದಲ್ಲಿ ಇಡಲಾಗಿರುವ ಇಲಾಖೆಯ ಆನೆಗಳಿಗೆ ರೇಷನ್‌ಗಳನ್ನು ಸರಬರಾಜು ಮಾಡಲು ಟೆಂಡರ್

ವಿಧ್ಯುಕ್ತವಾದ ಟೆಂಡರ್ ಫಾರಂನಲ್ಲಿ ಮೊಹರಾದ ಟೆಂಡರ್‌ಗಳು, 1973 ನೇ ಕ್ಯಾಲೆಂಡರ್ ವರ್ಷಕ್ಕಾಗಿ ಅಥವಾ ಹೊಸ ಟೆಂಡರುಗಳು ಕರೆಯಲ್ಪಡುವವರೆಗೆ ಯಾವುದು ತಡವೋ ಅಂತಹವನ್ನು, ಇಲಾಖೆ ಆನೆಗಳಿಗೆ ರೇಷನ್‌ಗಳನ್ನು ಸರಬರಾಜು ಮಾಡುವುದಕ್ಕಾಗಿ, ಮೈಸೂರು-1ರಲ್ಲಿರುವ ಮೈಸೂರು ವಿಭಾಗದ, ವಿಭಾಗ ಅರಣ್ಯ ಅಧಿಕಾರಿಯವರಿಂದ ಮೈಸೂರು - 1 ರಲ್ಲಿರುವ ಮೈಸೂರು ವಿಭಾಗದ, ವಿಭಾಗದ ಅರಣ್ಯ ಅಧಿಕಾರಿಯವರ ಕಛೇರಿಯಲ್ಲಿ 14-12-1972 ರ ಮಧ್ಯಾಹ್ನ 4 ಗಂಟೆವರೆಗೆ ಸ್ವೀಕರಿಸಲ್ಪಡುವುವು. ಇದು ಸಾರ್ವಜನಿಕರ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸಲ್ಪಟ್ಟಿದೆ. ನಿಗದಿ ಆಗಿರುವ ತಾರೀಖು ಸಾರ್ವತ್ರಿಕ ರಜಾದಿನ ಆಗಿದ್ದಲ್ಲಿ, ಮುಂದಿನ ಕೆಲಸದ ದಿನದಲ್ಲಿ ಟೆಂಡರ್‌ನ್ನು ಸ್ವೀಕರಿಸಲಾಗುವುದು. ಮೈಸೂರಿನಲ್ಲಿರುವ ವಿಭಾಗ ಅರಣ್ಯ ಅಧಿಕಾರಿಯವರಿಗೆ ರೂ. 5/- (ಐದು ರೂಪಾಯಿ) ಮಾತ್ರ ಜೊತೆಗೆ ಜಾರಿಯಲ್ಲಿರುವ ಮಾಮೂಲಿ ನೂರಂಟಿ ತೆರಿಗೆಯನ್ನು ಪ್ರತಿಯೊಂದಕ್ಕೆ 13-12-1972 ರ ಸಂಜೆ 5-30 ರವರೆಗೆ ಪಾವತಿಮಾಡಿ ವಿಧಾಯಕವಾದ ಟೆಂಡರ್ ಫಾರಂಗಳನ್ನು ಪಡೆಯಬಹುದು ; ಈ ಹಣವನ್ನು ವಾಪಸು ಮಾಡಲಾಗುವುದಿಲ್ಲ.

ಕೆಲಸದ ಯಾವುದೇ ದಿನಗಳಲ್ಲಿ ಕಛೇರಿ ಕೆಲಸದ ವೇಳೆಗಳಲ್ಲಿ, ಮೈಸೂರು - 1 ರಲ್ಲಿರುವ, ಮೈಸೂರು ವಿಭಾಗದ, ವಿಭಾಗ ಅರಣ್ಯ ಅಧಿಕಾರಿಯವರಿಂದ ಟೆಂಡರ್ ಷರತ್ತುಗಳ ಹೆಚ್ಚು ವಿವರಗಳನ್ನು ಪಡೆಯಬಹುದು

ಈರಪ್ಪ
ವಿಭಾಗ ಅರಣ್ಯ ಅಧಿಕಾರಿಯವರು
ಮೈಸೂರು

ಭತ್ತದ ಸಾಗಾಣಿಕೆ ಮೇಲೆ ಪ್ರತಿಬಂಧಕ

ಬೆಂಗಳೂರು— ಭತ್ತ, ಅಕ್ಕಿ, ಕುಸಬಲಕ್ಕಿಯನ್ನು ಒಂದು ಜಿಲ್ಲೆಯಿಂದ ಹೊರಕ್ಕೆ ಸಾಗಿಸಬೇಕಾದರೆ, ಪರ್ಮಿಟ್ ಪಡೆಯಬೇಕೆಂದು ಸರ್ಕಾರದ ಆಜ್ಞೆ ಯಾಗಿದೆ.

★

ಮುಷ್ಕರ ಮತ್ತು ಲಾಕ್ ಔಟ್

ನವದೆಹಲಿ— ಮುಷ್ಕರ ಮತ್ತು ಲಾಕ್ ಔಟ್‌ಗಳನ್ನು ಪ್ರತಿಬಂಧಿಸುವ ಯೋಚನೆ ಸರಕಾರಕ್ಕಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

ಅತಿ ಶೋಚನೀಯ ವಿಷಯ !

ಬೆಂಗಳೂರು, ಬೊಂಬಾಯಿಗಳಂತಹ ಸ್ಥಳಗಳಲ್ಲಿ ರೂ. 2000 ಬಾಳುವ ಜೋಡಿ ಎತ್ತುಗಳು ರೂ. 20 ಕ್ಕೂ; ರೂ. 300 ಕ್ಕೂ ಹೆಚ್ಚು ಬೆಲೆಯ ತೊಲಾ ಚಿನ್ನ ರೂ. 260 ಕ್ಕೂ ಉತ್ತರ ಮೈಸೂರಿನ ಅಭಾವ ಪೀಡಿತ ಜಿಲ್ಲೆಗಳಲ್ಲಿ ಮಾರಲಾಗುತ್ತಿದೆ ಎಂದು ಹಳೇ ಎಂ ಪಿ ಸಿ ಸಿ ಕಾರ್ಯದರ್ಶಿ ಶ್ರೀ ರಾಂಪುರೆ ಹೇಳಿದರು.

● ನವದೆಹಲಿ— ಹಣದುಬ್ಬರ ಮತ್ತು ಜೋತಾ ಆರ್ಥಿಕತೆ ತಗ್ಗಿಸಲು ಸರಕಾರ ಒಟ್ಟು ರೂ. 100 ಕೋಟಿಯ ಎರಡು ಸಾಲಗಳನ್ನು ಎತ್ತಿದೆ.

ಜಂಖಾನಾ ರೇಸಸ್

ಮೈಸೂರು— ನಾಳೆ ಜಂಖಾನಾ ರೇಸಸ್ ಪ್ರಾರಂಭದ ದಿನ 6 ರೇಸ್‌ಗಳಿವೆ.

ಸಿಂಹದ ಬದಲು ಹುಲಿ

ನವದೆಹಲಿ— 5 ವರ್ಷಗಳಿಂದ ಸಿಂಹವು ಭಾರತದ ರಾಷ್ಟ್ರ ಪ್ರಾಣಿಯಾಗಿತ್ತು – ಅದನ್ನು ಬದಲಿಸಿ ಹುಲಿಯನ್ನು ರಾಷ್ಟ್ರ ಪ್ರಾಣಿಯಾಗಿ ಮಾಡಲಾಗಿದೆ.– ಕಾರಣ ಸಿಂಹವು ಗುಜರಾತಿನಲ್ಲಿ ಮಾತ್ರವಿದ್ದು, ಹುಲಿಯು ದೇಶದ ಅನೇಕ ಭಾಗಗಳಲ್ಲಿವೆ ಎಂದು ಈ ಸಂಬಂಧದ ಮಂಡಲಿ ಅಧ್ಯಕ್ಷ ಡಾ || ಕರಣಸಿಂಗ್ ಹೇಳಿರುವರು

ಕೆಲಸ ಹುಡುಕುವವರು

ದೇಶದಲ್ಲಿ ರಿಜಿಸ್ಟರಾದ ಕೆಲಸ ಹುಡುಕುವವರ ಸಂಖ್ಯೆ 1970 ರಲ್ಲಿ 40.69 ಲಕ್ಷ ಇದ್ದದ್ದು, 1972 ಸೆಪ್ಟಂಬರ್ 30 ರಂದು 63.58 ಲಕ್ಷಕ್ಕೆ ಏರಿತು.

ಮೈಸೂರು ಜಿಲ್ಲೆಗೂ ಉಂಟು

ನವದೆಹಲಿ— ಕೈಗಾರಿಕೆಗಳಿಗೆ ಅರ್ಥ ನೆರವನ್ನು ನೀಡುವ ಸಂಸ್ಥೆಗಳ ಸ್ಥಿತಿಯಾ ಯ್ಥಿತಿ ಆರ್ಥಿಕತೆಗೆ ದೇಶದಲ್ಲಿ ಆರಿಸಲಾಗಿರುವ 225 ಜಿಲ್ಲೆಗಳಲ್ಲಿ ಮೈಸೂರು ಜಿಲ್ಲೆಯೂ ಒಂದಾಗಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಗಿದೆ.

ಮುಖ್ಯಮಂತ್ರಿಗಳವರ ಪಾದಯಾತ್ರೆ

ಮೈಸೂರು— ಚಿಕ್ಕ ಉಳಿತಾಯ ಠೇವಣಿ ಹೆಚ್ಚಿಸಲು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಪಾದಯಾತ್ರೆ ನಡೆಸುವರೆಂದು ಜಿಲ್ಲಾಧಿಕಾರಿಯವರು ಶ್ರೀ ಡಿ ಕೃಷ್ಣರವರು ಸಲಹಾ ಸಮಿತಿಗೆ ತಿಳಿಸಿದರು.

ಕಣ್ಣು ದಾನ

ಟೆಲ್ ಅವಿಲ್— ಭಾರತದ ಯಹೂದಿ ನಾಯಕ ಜುಡಾ ಡೇವಿಡ್ ತನ್ನ ಒಂದು ಕಣ್ಣನ್ನು, ಒಂದೇ ಕಣ್ಣಿರುವ ಇಸ್ರೇಲ್ ರಕ್ಷಣಾ ಮಂತ್ರಿ ಜನರೋಷೆ ಡಾಯ್ಯರಿಗೆ ಉದಾರ ದಾನ ಮಾಡುವುದಾಗಿ ತಿಳಿಸಿದಾರೆ.

ವುಡ್‌ಲಾಂಡ್ಸ್ ಅಮೋಘ 9 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10-30 ಸತ್ತೆ ಶಕ್ತಿ ಈ

ಅಪೆರಾ 2 ನೇ ವಾರ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಶಾದಿ ಕೆ ಬಾದ್

ಪಾತ್ರ : ಜಿತೇಂದ್ರ, ರಾಖಿ, ಶತ್ರುಘ್ನಸಿನ್ಹ, ನಾಜ್ ಮತ್ತು ಶ್ಯಾಮ

ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು

Edited Printedand Published by Dharmapracharanirata M S Krishna Rao (Propretor) at the Satyavad Press, Chamarajpuram Mysore

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 26-11-72 ಭಾನುವಾರ

ಕಲಾಕ್ಷೇತ್ರ

5 ರಿಂದ 6 ಸಂಜೆ	ಶ್ರೀ ತಾಂಡವಮೂರ್ತಿ, ಮಂಡ್ಯ	ಸಂಗೀತ
6 ರಿಂದ 7	ಶ್ರೀ ಮೋಹನಚಂದ್ರ	ಸಂಗೀತ
7 ರಿಂದ 9-30	ವಿನಾಯಕ ಕಲಾ ಸಂಘ, ನಂಜನಗೂಡು	ನಾಟಕ– “ಕುರುಕ್ಷೇತ್ರ”

ಜೀವನಕಾಯಿನಕಟ್ಟೆ

5-30 ರಿಂದ 6-30	ಶ್ರೀ ಸೋಮಣ್ಣ, ಮೈಸೂರು	ಸಂಗೀತ
6-30 ರಿಂದ 7-30	ಶ್ರೀ ಪುಟ್ಟಣ್ಣ, ಮೈಸೂರು	ಪಿಟೀಲು
7-30 ರಿಂದ 9-30	ಬೀರೇಶ್ವರ ಸಂಘ, ಮೈಸೂರು	ನಾಟಕ– “ನಾರದವಿಲಾಸ”

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

Quality Printing Neat Binding

Lakshminarasimha Pres

Sivarampet. Mysore

Protect the Cow

Help The Gorakshana

—Humanitarian Propoganda Monthly—

ಭಾರತದಲ್ಲಿ ಗೋವಧೆ ಪೂರ್ಣ ನಿಶ್ಶೇಧವಾಗಲಿ

For Rugs, Sweaters and Kashmir Coats Visit Bank Road Bahusar